

Photo: Aloke Mitra

# ರಾಗ ಮಾಲ

## ರವಿಶಂಕರರ ಜೀವನ ಮತ್ತು ಸಂಗೀತ ಸಾಧನೆ

## ಬಾಲ್ಯದ ನೆನಪುಗಳು

ರವಿಶಂಕರ್ ಹುಟ್ಟಿದ್ದು ವಾರಣಾಸಿಯ ಬಂಗಾಲಿ ಕುಟುಂಬವೊಂದರಲ್ಲಿ. ಇವರಿಗೆ ಐದು ಜನ ಸಹೋದರರು. ಇವರೇ ಎಲ್ಲರಿಗಿಂತ ಕಿರಿಯರು. ಅಮ್ಮ ಹೇಮಾಂಗಿನೀ ದೇವಿಯ ಮುದ್ದಿನ ಕೂಸಾದ ರವಿಶಂಕರ್ ಸದಾ ಅವರಿಗಂಟಿಕೊಂಡೇ ಬೆಳೆದರು. ತಂದೆ ಶ್ಯಾಮಶಂಕರ್, ಝಲಾವರ್‌ನ ಮಹಾರಾಜನ ಬಳಿ ದಿವಾನರಾಗಿದ್ದರು. ಆಮೇಲೆ ಆ ಕೆಲಸ ಬಿಟ್ಟು ವಕೀಲಿ ವೃತ್ತಿಗೆಂದು ಲಂಡನ್ನಿಗೆ ಹೊರಟಾಗ, ವರ್ಣಚಿತ್ರ ಕಲಿಸಲೆಂದು ಹಿರಿಮಗ ಉದಯಶಂಕರನನ್ನೂ ಕರೆದೊಯ್ದರು. ರಾಜನ ಆಸ್ಥಾನದಲ್ಲಿ ಹಲವು ವರ್ಷ ಸೇವೆ ಸಲ್ಲಿಸಿದ್ದರಿಂದ ಒಂದಿಷ್ಟು ಮಾಶಾಸನ ಸಿಗುತ್ತಿತ್ತು. ಸಂಸಾರಕ್ಕೆ ಅದೇ ಆಧಾರ. ಗತವೈಭವದ ಸಾಕ್ಷಿಯಾಗಿ ಉಳಿದುಕೊಂಡಿದ್ದ ವಜ್ರದ ಒಡವೆಗಳು, ಅಪ್ಪಟ ಬಂಗಾರದ ನೇಯ್ಗೆಯಿದ್ದ ರೇಷಿಮೆಯ ಸೀರೆ ಇವೆಲ್ಲಾ ನಿಧಾನವಾಗಿ ಗಿರವಿ ಅಂಗಡಿ ಸೇರಿದವು. ಹೀಗೆ ಅಮ್ಮನ ಮೌನಸಂಕಟ, ನೋವು ಇವೆಲ್ಲದರ ನಡುವೆಯೇ ರವಿಶಂಕರ್ ಬೆಳೆದರು. ರವಿಶಂಕರ್ ಅವರಿಗೆ ಹೇಳಿಕೊಳ್ಳುವಂತಹ ಸಂಗೀತದ ಹಿನ್ನೆಲೆಯೇನಿರಲಿಲ್ಲ. ಅಮ್ಮ ಸಂಗೀತ ಕಲಿತಿರಲಿಲ್ಲ. ಆದರೆ ಆಗಾಗ ಆಕೆ ಇಂಪಾಗಿ ಹಾಡುತ್ತಿದ್ದ ಹಾಡುಗಳು ಬಾಲಕನ ಎದೆಗೆ ಇಳಿದಿದ್ದವು.

**"ಅಮ್ಮ ಸಂಗೀತ ಕಲಿತಿರಲಿಲ್ಲ. ಆದರೆ ಅವರ ಧ್ವನಿ ತುಂಬಾ ಚೆನ್ನಾಗಿತ್ತು. ಅವಳು ದಿವಾನರ ಪತ್ನಿಯಾಗಿದ್ದರಿಂದ ಗೌಹರ್ ಜಾನ್, ಜಾನಕಿ ಬಾಯಿ, ಮೋತಿ ಬಾಯಿ ಮೊದಲಾದ ದೊಡ್ಡ ಸಂಗೀತಗಾರರ ಸಂಗೀತ ಕೇಳುವ ಅವಕಾಶ ಅವಳದಾಗಿತ್ತು. ಕೇಳಿ ಕೇಳಿಯೇ ಒಂದಿಷ್ಟು ಬಂದಿತ್ತು. ಅವಳಿಗೆ ಗೊತ್ತಿಲ್ಲದೆಯೇ ಠುಮ್ರಿಗಳನ್ನು ಸಲೀಸಾಗಿ ಹಾಡುತ್ತಿದ್ದಳು. ಅವಳು ಹಾಡುತ್ತಿದ್ದ ಒಂದು ಬೆಂಗಾಲಿ ನಾಟಕದ ಹಾಡು "ಕಹಾನ್ ದ ಬಂದನ್, ಬೃಂದಾವನ್. . ." ನನ್ನನ್ನು ಈಗಲೂ ಕಾಡುತ್ತದೆ. ಅಮ್ಮ ಮಧುರವಾದ ಮೆಲುದನಿಯಲ್ಲಿ ಲಾಲಿ ಹಾಡುತ್ತಿದ್ದುದು ನನಗೆ ಇನ್ನೂ ನೆನಪಿದೆ. ಅಮ್ಮ ಹಾಡುತ್ತಿದ್ದ ಹಳೆಯ ಮಧುರಗೀತೆಗಳು, ಶಾಸ್ತ್ರೀಯ ಸಂಗೀತದ ಗೀತೆಗಳು, ನಾಟಕದ ಹಾಡುಗಳು ನನಗೆ ಬಾಯಿಪಾಠವಾಗಿದ್ದವು. ಅವುಗಳನ್ನು ಹಾಡಿಕೊಳ್ಳುವುದು ನನಗೆ ತುಂಬಾ ಖುಷಿಕೊಡುತ್ತಿತ್ತು. ನನ್ನಪ್ಪನಿಗೂ ಸಂಗೀತದ ಗೀಳಿತ್ತು. ಒಂದಿಷ್ಟು ಸಂಗೀತವನ್ನೂ ಕಲಿತಿದ್ದರು. ಬಿಕಾನೀರ್ ಘರಾನಾದ ಪ್ರಸಿದ್ಧ ಬೀನ್‌ವಾದಕ ಮಿಥಾಯ್‌ಲಾಲ್ ಬಳಿ ಅವರು ಧ್ರುಪದ್ ಶೈಲಿಯ ಹಾಡುಗಾರಿಕೆಯನ್ನು ಕಲಿತಿದ್ದರು. ಅವರಿಗೆ ವೇದಪಠಣದ ಪಾಠವೂ ಸಾಂಪ್ರದಾಯಿಕವಾಗಿಯೇ ಆಗಿತ್ತು. ಅವರು ಭಾರತೀಯ ಬ್ಯಾಲೆಗೆ ಸಂಬಂಧಿಸಿದಂತೆ ಲಂಡನ್ನಿನಲ್ಲಿ ಒಂದಿಷ್ಟು ಪ್ರಯೋಗಗಳನ್ನೂ ಮಾಡುತ್ತಿದ್ದರು. ನನ್ನಣ್ಣ ರಾಜೇಂದ್ರನಿಗೂ ಸಂಗೀತವೆಂದರೆ ತುಂಬಾ ಪ್ರೀತಿ. ಒಂದು ಸಣ್ಣ ಛೇಂಬರ್ ಆರ್ಕೆಸ್ಟ್ರಾ ತಂಡ ಕಟ್ಟಿಕೊಂಡಿದ್ದ. ಅವರೆಲ್ಲಾ ಪ್ರತಿವರ್ಷ ನಾಟಕ ಆಡುತ್ತಿದ್ದರು. ಮನೆಯಲ್ಲಿ ನನ್ನಣ್ಣ ರಾಜೇಂದ್ರ ಕೆಲವು ಹಳೆಯ ವಾದ್ಯಗಳನ್ನು ಸಂಗ್ರಹಿಸಿಟ್ಟಿದ್ದ. ಅವುಗಳಲ್ಲಿ ಒಂದು ಸಣ್ಣ ಸಿತಾರ್, ಹಾರ್ಮೋನಿಯಂ, ಏಸ್‌ರಾಜ್ ಹೀಗೆ ಹಲವಾರು ವಾದ್ಯಗಳಿದ್ದವು. ಅಮ್ಮ ಅಡುಗೆಮನೆಯಲ್ಲಿದ್ದಾಗ ಮೆತ್ತಗೆ, ಕಳ್ಳನಂತೆ ಹೋಗಿ, ಅವುಗಳನ್ನು ನುಡಿಸುತ್ತಿದ್ದೆ. ಅದು ನನಗೆ ತುಂಬಾ ಖುಷಿಕೊಡುತ್ತಿತ್ತು. ಅಮ್ಮ ಬಯ್ಯಬಹುದು ಎನ್ನುವ ಭಯ ಇತ್ತು. ನಂತರದಲ್ಲಿ ರಾಜೇಂದ್ರ ಹಾಡುತ್ತಿದ್ದ ಹಾಡುಗಳನ್ನು ನಾನು ನುಡಿಸಿದಾಗ ಅವರೆಲ್ಲಾ ಬೆರಗಾಗುತ್ತಿದ್ದರು."**

ರವಿಶಂಕರರಿಗೆ ಸುಮಾರು ಎಂಟು ವರ್ಷವಿದ್ದಾಗ, ಅವರ ಮನೆಗೆ

ರಾಜೇಂದ್ರನ ಗೆಳೆಯನೊಬ್ಬ ಬರುತ್ತಿದ್ದ. ಅವನು ಅವರಿಗೆ ಹಲವು ಬಂಗಾಳಿ ಹಾಡುಗಳನ್ನು, ಟ್ಯಾಗೋರರ ಒಂದೆರಡು ಹಾಡುಗಳನ್ನು ಕಲಿಸಿದ್ದ. ರವಿಶಂಕರ್ ಅವರ ಕಂಠ ಸೊಗಸಾಗಿತ್ತು. ಹಾಗಾಗಿ ಸಮಯ ಸಿಕ್ಕಾಗಲೆಲ್ಲಾ ಮನೆಯವರು ಹಾಡುವುದಕ್ಕೆ ಅವರನ್ನು ಪೀಡಿಸುತ್ತಿದ್ದರು. ಶಾಲೆಯಲ್ಲೂ ಆಗಾಗ ಅವರ ಹಾಡಿನ ವಿಶೇಷ ಕಾರ್ಯಕ್ರಮಗಳಿರುತ್ತಿದ್ದವು. ಮನೆಯಲ್ಲಿದ್ದ ಗ್ರಾಮಾಫೋನಿನಲ್ಲಿ ವಾದ್ಯಸಂಗೀತ ಮುದ್ರಿಕೆಗಳು, ಧಾರ್ಮಿಕ ಗೀತೆಗಳು, ಹಿಂದಿ ಮತ್ತು ಬಂಗಾಳಿಯಲ್ಲಿದ್ದ ಅರೆಶಾಸ್ತ್ರೀಯ ಸಂಗೀತ, ನೃತ್ಯಸಂಗೀತ ರೂಪಕಗಳ ಧ್ವನಿಮುದ್ರಣಗಳನ್ನು ಕೇಳುತ್ತಿದ್ದರು. ಅವುಗಳನ್ನು ಹಾಗೇ ಅನುಕರಿಸಲು ಪ್ರಯತ್ನಿಸುತ್ತಿದ್ದರು. ಇದರ ಜೊತೆಗೆ ವಾರಣಾಸಿಯ ಭಕ್ತರು ಗುಂಪುಗುಂಪಾಗಿ ಹಾಡಿಕೊಂಡು ಹೋಗುತ್ತಿದ್ದ ಭಜನೆಗಳು, ದೊಡ್ಡ ದೊಡ್ಡ ಮಹಲುಗಳ ಮುಂದೆ ನಿಂತು ಹಿರಿಯ ಸಂಗೀತಗಾರರು ನುಡಿಸುತ್ತಿದ್ದ ಷಹನಾಯಿ ನಾದ ಅವರ ಕಿವಿಗೆ ಸದಾ ಬೀಳುತ್ತಿತ್ತು.



1929ರ ಕೊನೆಯ ವೇಳೆಗೆ ದೊಡ್ಡಣ್ಣ ಉದಯ್ ಭಾರತಕ್ಕೆ ಮರಳಿದರು. ಅವರು ಲಂಡನ್ನಿನಲ್ಲಿದ್ದಾಗ ತಂದೆಯ ಜೊತೆ ಬ್ಯಾಲೆಗೆ ಸಂಗೀತ-ನೃತ್ಯ ಸಂಯೋಜನೆ ಮಾಡುತ್ತಿದ್ದರು. ಅದರಿಂದಲೋ ಏನೋ, ಅವರ ಆಸಕ್ತಿ ನಿಧಾನವಾಗಿ ವರ್ಣಚಿತ್ರದಿಂದ ಸಂಗೀತ, ನೃತ್ಯದೆಡೆಗೆ ಹೊರಳಿತು. ಮತ್ತೆ ಪ್ಯಾರಿಸ್ಸಿಗೆ ಹೋಗುವಾಗ ಬ್ಯಾಲೆಯ ಒಂದು ತಂಡವನ್ನೇ ಇಲ್ಲಿಂದ ಕರೆದುಕೊಂಡು ಹೋಗಬೇಕು, ಅಲ್ಲಿನವರಿಗೆ ಭಾರತೀಯ ಸಂಗೀತ ನೃತ್ಯವನ್ನು ಪರಿಚಯಿಸಬೇಕು ಎಂಬ ಆಸೆ ಇಟ್ಟುಕೊಂಡಿದ್ದರು. ಆದರೆ ಅಂತಹ ಒಂದು ತಂಡವನ್ನು ಕಟ್ಟುವುದಕ್ಕೆ ಅವರಿಗೆ ಒಂದು ವರುಷವೇ ಬೇಕಾಯಿತು. ಕೊನೆಗೂ "ಹಿಂದು ಡ್ಯಾನ್ಸರ್ಸ್ ಅಂಡ್ ಮ್ಯೂಸಿಷಿಯನ್ಸ್" ತಂಡ ಸಜ್ಜಾಯಿತು. ತಂಡದೊಡನೆ ಪ್ಯಾರಿಸ್ಸಿಗೆ ಹೊರಟಾಗ ರವಿಶಂಕರ್ ಹಾಗೂ ಉಳಿದ ಸಹೋದರರನ್ನು ಜೊತೆಗೆ ಅಮ್ಮನನ್ನೂ ಕರೆದೊಯ್ದರು. ಪ್ಯಾರಿಸ್ಸಿನ ದೊಡ್ಡ ಮನೆಯೊಂದರಲ್ಲಿ ತಾಲೀಮು ಪ್ರಾರಂಭವಾಯಿತು. ಒಂದು ಕೊಠಡಿಯಲ್ಲಿ ಹಲವಾರು ವಾದ್ಯಗಳ ದೊಡ್ಡ ಸಂಗ್ರಹವೇ ಇತ್ತು. ಅಷ್ಟೊಂದು ವಾದ್ಯಗಳನ್ನು ಒಟ್ಟಿಗೆ ನೋಡಿ ರವಿಶಂಕರ್ ಹಿಗ್ಗಿಹೋಗಿದ್ದರು. ಸಮಯ ಸಿಕ್ಕಾಗೆಲ್ಲಾ ಸಿತಾರ್, ಏಸ್‌ರಾಜ್, ತಬಲಾ ಇವುಗಳ ಮೇಲೆ ಕೈಯ್ಯಾಡಿಸುತ್ತಿದ್ದರು.

"ಪ್ಯಾರಿಸ್ಸಿಗೆ ಹೋದಾಗ ನನಗೆ ಹತ್ತು ವರ್ಷ. ಮುಂದಿನ ಏಳು ವರುಷಗಳೂ ಭಾರತ, ಪ್ಯಾರಿಸ್ ಮತ್ತು ಯೂರೋಪ್ ಪ್ರವಾಸದಲ್ಲಿ ಕಳೆಯಿತು. ಇಡೀ ದಿನ ಸಂಗೀತ,



ನೃತ್ಯದಲ್ಲೇ ಕಳೆದುಹೋಗುತ್ತಿತ್ತು. ನಮ್ಮ ತಂಡದಲ್ಲಿ ಅಲ್ಲಾವುದ್ದೀನ್‌ಖಾನ್ ಅವರ ನೆಚ್ಚಿನ ಶಿಷ್ಯ ತಿಮಿರ್ ಭರಣ್ ಸರೋದ್ ನುಡಿಸುತ್ತಿದ್ದರು. ವಿಷ್ಣು ದಿಗಂಬರ್‌ಜೀಯವರ ಶಿಷ್ಯ ವಿಷ್ಣುದಾಸ್ ಶಿರಾಲಿ ದೊಡ್ಡ ಗಾಯಕರು. ಅವರು ಹಾಡುವುದರ ಜೊತೆಗೆ ಜಲತರಂಗ್, ತಬಲಾ ತರಂಗ್, ತಬಲಾ, ಸಿತಾರ್ ಮುಂತಾದವುಗಳನ್ನು ನುಡಿಸುತ್ತಿದ್ದರು. ಜೊತೆಗೆ ಇಂದೋರಿನ ಸೇನಿಯಾ ಘರಾನೆಯ ಅಶ್ಪೇಕರ್ ಬುವಾ ಸೊಗಸಾಗಿ ಹಾಡುತ್ತಿದ್ದರು. ಅಲ್ಲಿರುವಷ್ಟೂ ಕಾಲ ಇವುಗಳನ್ನೆಲ್ಲಾ ಕೇಳುತ್ತಾ ಬೆಳೆದೆ. ತಿಮಿರ್ ಭರಣ್ ಮುಂಜಾನೆಯ ಹಾಗೂ ಮಧ್ಯಾಹ್ನದ ರಾಗಗಳನ್ನು ಅಭ್ಯಾಸ ಮಾಡುತ್ತಿದ್ದರು. ಮೊದಮೊದಲು ನನಗೆ ಆ ರಾಗಗಳನ್ನು ಗುರುತಿಸುವುದಕ್ಕೆ ಆಗುತ್ತಿರಲಿಲ್ಲ. ಕ್ರಮೇಣ ಒಂದೊಂದೇ ರಾಗ ಪರಿಚಯವಾಗುತ್ತಾ ಹೋಯಿತು. ಕೊನೆಗೆ ಅವೆಲ್ಲವನ್ನೂ ಗುರುತಿಸುವುದಕ್ಕೆ ಸಾಧ್ಯವಾಯಿತು. ಸಂಗೀತ ಸದಾ ಕಾಲ ಕಿವಿಯ ಮೇಲೆ ಬೀಳುತ್ತಿತ್ತು. ಆದರೆ ನನ್ನನ್ನು ಕೂರಿಸಿಕೊಂಡು ಹೇಳಿಕೊಡುವವರು ಯಾರೂ ಇರಲಿಲ್ಲ. ಆರ್ಕೆಸ್ಟ್ರಾಗಳನ್ನು ಕೇಳುತ್ತಿದ್ದಾಗ ನನಗೂ ಹಾಗೆ ನುಡಿಸುವುದಕ್ಕಾಗುತ್ತದೆ ಎಂದೆನಿಸುತ್ತಿತ್ತು. ನಾನು ಸರಿಯಾದ ಸ್ವರಗಳನ್ನೇ ನುಡಿಸುತ್ತಿದ್ದೆ. ಆದರೆ ನನಗೆ ವಾದ್ಯದ ಮೂಲ ತಂತ್ರಗಾರಿಕೆ ಮತ್ತು ಫಿಂಗರಿಂಗ್ ಬಗ್ಗೆ ಏನೇನೂ ತಿಳಿದಿರಲಿಲ್ಲ. ಆದರೆ ಅಣ್ಣನ ಜೊತೆಗಿನ ಈ ಒಡನಾಟದಿಂದ ನನ್ನೊಳಗೆ ಒಬ್ಬ ಕಲಾವಿದ ರೂಪುಗೊಳ್ಳುತ್ತಿದ್ದ. ಆ ಪರಿಸರ ನನ್ನಲ್ಲಿ ಸೃಜನಶೀಲತೆಯನ್ನು ಹುಟ್ಟುಹಾಕಿತು. ನಮ್ಮ ಪ್ರಾಚೀನ ಪರಂಪರೆ ಮತ್ತು ಸಂಪ್ರದಾಯಗಳನ್ನು ಮೆಚ್ಚಿ, ಆಸ್ವಾದಿಸುವುದನ್ನು ಕಲಿಸಿತು."

## ಪಾಶ್ಚಿಮಾತ್ಯ ಸಂಗೀತದ ಪರಿಚಯ

ರವಿಶಂಕರ್ ಪ್ಯಾರಿಸ್ಸಿನಲ್ಲಿದ್ದಾಗ ಅವರಿಗೆ ಭಾರತೀಯ ಸಂಗೀತದ ಜೊತೆಗೆ, ಅತ್ಯುತ್ತಮವಾದ ಪಾಶ್ಚಾತ್ಯ ಸಂಗೀತವನ್ನೂ ಕೇಳುವ ಅವಕಾಶ ದೊರಕಿತು. ಪಾಶ್ಚಾತ್ಯ ಸಂಗೀತಕ್ಕೆ ಅವರಷ್ಟು ತೆರೆದುಕೊಂಡ ಭಾರತೀಯ ಸಂಗೀತಗಾರರು ಇಲ್ಲವೆಂದೇ ಹೇಳಬಹುದು. ತೋಸ್ಕಾನಿನಿ, ಪದೆರೆವ್‌ಸ್ಕಿ, ಹೈಫೆಟ್ಜ್, ಕ್ರೆಸ್ಲರ್ ಮುಂತಾದವರನ್ನು

ನೋಡಿ. ಅವರ ಸಂಗೀತವನ್ನು ಕೇಳುವ ಅವಕಾಶ ದೊರಕಿತು. ಇದರಿಂದ ಅವರಿಗೆ ಪಾಶ್ಚಿಮಾತ್ಯ ಸಂಗೀತದ ಸಿಂಫೋನಿ, ಕಾನ್ಸರ್ಟೋ, ಸೋಲೋ ರಚನೆಗಳು ಪರಿಚಯವಾದವು. ಫ್ರೆಂಚ್ ಅಕಾರ್ಡಿಯನ್ ಸಂಗೀತ ಅವರಿಗೆ ಹೆಚ್ಚು ಹಿಡಿಸುತ್ತಿತ್ತು. ಫ್ಲಾಮೆಂಕೋ ಮತ್ತು ಸ್ಪಾನಿಷ್ ಸಂಗೀತವನ್ನು ತುಂಬಾ ಕೇಳುತ್ತಿದ್ದರು. ರಷ್ಯಾ ಹಾಗೂ ಹಂಗೇರಿಯ ಸಂಗೀತವನ್ನೆಲ್ಲಾ ಅವರು ಆ ವೇಳೆಗಾಗಲೇ ಕೇಳಿದ್ದರು. ಇಂತಹ ಕೇಳ್ಮೆಯಿಂದಾಗಿ ಅವರಿಗೆ ಅದರ ಸೂಕ್ಷ್ಮಗಳೆಲ್ಲಾ ಚೆನ್ನಾಗಿ ಅರ್ಥವಾಗುತ್ತಿತ್ತು.

"ಅಲ್ಲಿದ್ದಾಗ ಅತ್ಯುತ್ತಮವಾದ ಪಾಶ್ಚಾತ್ಯ ಸಂಗೀತವನ್ನು ಕೇಳಿದೆ. ಅಲ್ಲಿನ ದೊಡ್ಡ ಸಂಗೀತಗಾರರೆಲ್ಲಾ ನಮ್ಮನೆಗೆ ಬರುತ್ತಿದ್ದರು. ಸೆಗೊವಿಯಾ ನಮ್ಮ ಪಕ್ಕದಲ್ಲೇ ವಾಸಿಸುತ್ತಿದ್ದರು. ಅವರು ಆಗಾಗ ಮನೆಗೆ ಬರುತ್ತಿದ್ದರು. ಯಹೂದಿ ಮೆನುಹಿನ್ ಅವರ ಗುರು, ಪ್ರಖ್ಯಾತ ವಯೋಲಿನ್‌ವಾದಕ ಜಾರ್ಜ್ ಏಯನೆಸ್ಕೊ ಕೂಡ ಒಮ್ಮೆ ನಮ್ಮಲ್ಲಿಗೆ ಬಂದಿದ್ದರು. ಮೆನುಹಿನ್ ಆಗಿನ್ನು ಸಣ್ಣ ಹುಡುಗ. ಹಲವು ಹಿರಿಯ ಪಾಶ್ಚಾತ್ಯ ಸಂಗೀತಗಾರರು ನಮ್ಮಣ್ಣನ ಸ್ನೇಹಿತರಾಗಿದ್ದರು. ಹಾಗಾಗಿ ಪ್ರಖ್ಯಾತ ಕಾನ್ಸರ್ಟ್‌ಗಳಿಗೆ ಹೋಗುವುದಕ್ಕೆ ನನಗಾಯಿತು. ನಾನು ಪಾಶ್ಚಾತ್ಯ ಸಂಗೀತವನ್ನು ಕ್ರಮಬದ್ಧವಾಗಿ ಕಲಿಯಲಿಲ್ಲ. ಸ್ಕೂಲಿನಲ್ಲಿದ್ದಾಗ ಎರಡು ವರ್ಷ ಕಲಿತೆ. ಅದನ್ನು ಮುಂದುವರಿಸಲಾಗಲಿಲ್ಲ. ಆದರೆ ಪಾಶ್ಚಿಮಾತ್ಯ ಸಂಗೀತದ ಅತ್ಯುತ್ತಮವಾದ್ದನ್ನೆಲ್ಲಾ ಕೇಳುತ್ತಾ, ಮೈಗೂಡಿಸಿಕೊಂಡೆ. ಹಲವಾರು ಧ್ವನಿ ಮುದ್ರಣಗಳನ್ನು ಕೊಂಡು ಕೇಳಿದೆ. ಆ ಕಾಲದ ಪ್ರಖ್ಯಾತ ಸೆಲ್ಲೊ ವಾದಕ ಪ್ಯಾಬ್ಲೊ ಕ್ಯಾಸಲ್ಸ್ ಮೊದಲಾದ ಹಲವು ಖ್ಯಾತರ ಧ್ವನಿಮುದ್ರಣಗಳನ್ನು ಕೇಳಿದೆ. ನಂತರ 1932ರಲ್ಲಿ ಅಮೇರಿಕೆಯಲ್ಲಿದ್ದಾಗ ನಿಜವಾದ ಜಾಝ್ ಸಂಗೀತ, ಅರ್ಮ್‌ಸ್ಟ್ರಾಂಗ್, ಡ್ಯೂಕ್ ಎಲಿಂಗ್ಟನ್ ಇವರನ್ನೆಲ್ಲಾ ಕೇಳಿದೆ. ಆ ವೇಳೆಗಾಗಲೇ ಅಮ್ಮ ಕೂಡ ಭಾರತಕ್ಕೆ ವಾಪಸಾಗಿದ್ದರು. ನಾನು ಒಂಟಿಯಾಗಿಬಿಟ್ಟಿದ್ದೆ ಹಾಗಾಗಿ ಒಂದೇ ಸಮ ಸಂಗೀತ ಕೇಳುತ್ತಿದ್ದೆ. ಎಲ್ಲಾ ಬಗೆಯ ಸಂಗೀತವನ್ನೂ ಕೇಳುತ್ತಿದ್ದೆ. ಅಲ್ಲಿನ ಜಾನಪದ ಸಂಗೀತವನ್ನು ಸಾಕಷ್ಟು ಕೇಳಿದೆ. ಇವೆಲ್ಲಾ ನನ್ನನ್ನು ಎಷ್ಟು ಆವರಿಸಿಕೊಂಡಿದ್ದವೆಂದರೆ, ನಾನು ಯಾವುದೇ ಸಂಗೀತದ ಕಾರ್ಯಕ್ರಮಕ್ಕೆ ಹೋದರೂ, ಅದು ಪಾಶ್ಚಾತ್ಯ ಸಂಗೀತವಿರಲಿ, ಜಾಝ್ ಇರಲಿ, ಜನಪದ ಸಂಗೀತವಿರಲಿ, ಅಥವಾ ಭಾರತೀಯ ಶಾಸ್ತ್ರೀಯ ಸಂಗೀತವಿರಲಿ, ಅವೆಲ್ಲವೂ ನಮ್ಮ ಸಂಗೀತವೇ ಎನಿಸುವಷ್ಟು ನನಗೆ ಆತ್ಮೀಯವಾಗಿಬಿಟ್ಟಿದ್ದವು. ನನ್ನ ಸಹೋದರರೆಲ್ಲರೂ ನನಗಿಂತ ಸಾಕಷ್ಟು ಹಿರಿಯರು. ನಮ್ಮ ತಂಡದಲ್ಲಿ ನನ್ನ ವಾರಿಗೆಯವರು ಯಾರೂ ಇರಲಿಲ್ಲ. ಹಾಗಾಗಿ ಸದಾ ಕಥೆ, ಕಾದಂಬರಿಗಳನ್ನು ಓದುತ್ತಾ ನನ್ನೊಳಗೇ ಒಂದು ಅದ್ಭುತ ಕಲ್ಪನಾಲೋಕವನ್ನು ಸೃಷ್ಟಿಸಿಕೊಂಡುಬಿಟ್ಟಿದ್ದೆ. ನಾನು ನೋಡುತ್ತಿದ್ದ ಸಿನಿಮಾಗಳು ಮತ್ತು ನಾಟಕಗಳು ನನ್ನೊಳಗಿನ ಜಗತ್ತನ್ನು ಮತ್ತಷ್ಟು ಸಂಕೀರ್ಣಗೊಳಿಸಿದವು. ಮುಂದಿನ ದಿನಗಳಲ್ಲಿ ನನ್ನೊಳಗಿನ ಈ ಒಂಟಿತನ, ನಾನು ಸೃಷ್ಟಿಸಿಕೊಂಡಿದ್ದ ಕಲ್ಪನಾಲೋಕ ಹಾಗೂ ಅಮೂರ್ತವಾದುದನ್ನು ಗ್ರಹಿಸಬೇಕೆಂಬ ಹಂಬಲ ಇವೆಲ್ಲವೂ ನನ್ನ ಸಂಗೀತದಲ್ಲಿ ಹೊರಹೊಮ್ಮಿದವು."

ಈ ಹಿರಿಯರ ಒಡನಾಟದಿಂದಾಗಿ ಪಾಶ್ಚಿಮಾತ್ಯರು ಭಾರತೀಯ ಶಾಸ್ತ್ರೀಯ ಸಂಗೀತವನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾರೆ, ಅದರ ಬಗ್ಗೆ ಅವರ ಅಭಿಪ್ರಾಯವೇನು, ಇವೆಲ್ಲವನ್ನೂ ತಿಳಿಯುವುದು ರವಿಶಂಕರರಿಗೆ ಸಾಧ್ಯವಾಯಿತು. ರವಿಶಂಕರರ ಮನೆಗೆ ಬಂದಾಗ ಭಾರತೀಯ ಸಂಗೀತವನ್ನು ಕುರಿತಂತೆ ಅವರೆಲ್ಲಾ ತಮಗನ್ನಿಸಿದ್ದನ್ನು ಹೇಳುತ್ತಿದ್ದರು. ಅವರಲ್ಲಿ ಹೆಚ್ಚಿನವರು ಶುದ್ಧ ಶಾಸ್ತ್ರೀಯ ಸಂಗೀತವನ್ನು ಕೇಳಿಯೇ

ಇರಲಿಲ್ಲ, ಕೇವಲ ನೃತ್ಯ ಕಾರ್ಯಕ್ರಮಗಳ ಭಾಗವಾಗಿದ್ದ ಶಾಸ್ತ್ರೀಯ ಸಂಗೀತವನ್ನಷ್ಟೇ ಕೇಳಿದ್ದರು.

"ಅವರಿಗೆ ನಮ್ಮ ಸಂಗೀತದಲ್ಲಿ ಏಕತಾನತೆಯ ಅನುಭವವಾಗುತ್ತಿತ್ತು. ಅವರಿಗೆ ಅದು ಅಷ್ಟೊಂದು ಇಂಪೆನಿಸುತ್ತಿರಲಿಲ್ಲ. ಕೆಲವರಿಗೆ ಈ ಸಂಗೀತ ಎಲ್ಲಿ ಆರಂಭವಾಗಿ ಎಲ್ಲಿ ಮುಗಿಯುತ್ತದೆ ಎನ್ನುವುದೇ ತಿಳಿಯುತ್ತಿರಲಿಲ್ಲ. ಇನ್ನು ಕೆಲವರಿಗೆ ನಮ್ಮ ಸಂಗೀತದಲ್ಲಿ ತುಂಬಾ ಪುನರಾವರ್ತನೆ ಇದೆಯೆನಿಸುತ್ತಿತ್ತು. ಈ ಮಾತುಗಳನ್ನೆಲ್ಲಾ ಕೇಳುವಾಗ, ನಮ್ಮ ಭಾರತೀಯ ಸಂಗೀತ ಇವರಿಗೆ ಸರಿಯಾಗಿ ಅರ್ಥವಾಗಿಲ್ಲ, ಇವರದನ್ನು ತಪ್ಪಾಗಿ ಗ್ರಹಿಸಿದ್ದಾರೆ ಎನಿಸುತ್ತಿತ್ತು. ನಾವು ಹಾರ್ಮೊನಿ ಮತ್ತು ಕೌಂಟರ್‌ಪಾಯಿಂಟ್ ಇವುಗಳನ್ನು ಬಳಸದೇ ಇರುವುದು ಹಾಗೂ ನಮ್ಮಲ್ಲಿ ಮಾಡ್ಯುಲೇಷನ್ ಇಲ್ಲದಿರುವುದು ಅವರಿಗೆ ಗೊಂದಲವುಂಟುಮಾಡಿದೆ ಎಂದು ನನಗನಿಸಿತ್ತು. ನಮ್ಮ ಉತ್ಕೃಷ್ಟ ಸಂಗೀತ ಅವರಿಗೆ ಅರ್ಥವಾಗುತ್ತಿಲ್ಲವಲ್ಲ ಎಂದು ನನಗೆ ಸಂಕಟವಾಗುತ್ತಿತ್ತು. ಅವರಿಗೆ ಅದನ್ನು ಅರ್ಥಮಾಡಿಸಬೇಕೆಂಬ ತವಕವುಂಟಾಗುತ್ತಿತ್ತು. ಮುಂದೆ ನಮ್ಮ ಸಂಗೀತವನ್ನು ಅವರಿಗೆ ವಿವರಿಸುವ, ಅದರ ಲಕ್ಷಣಗಳನ್ನು ಕುರಿತು ಮಾತನಾಡುವ ನನ್ನ ಪ್ರಯತ್ನಕ್ಕೆ ಪ್ರೇರಣೆಯಾದದ್ದು ಇದೇ."


1932ರಲ್ಲಿ ಉದಯಶಂಕರ್ ಅವರ ತಂಡ ಅಮೆರಿಕೆಯಲ್ಲಿ ಪ್ರದರ್ಶನ ನೀಡುತ್ತಿತ್ತು. ಅದರಲ್ಲಿ ರವಿಶಂಕರ್ ಕಥಕ್ ನೃತ್ಯ ಮಾಡುತ್ತಿದ್ದರು. ತಾನು ಮುಂದೆ ವೃತ್ತಿಪರ ನರ್ತಕನೇ ಆಗುತ್ತೇನೆಂದುಕೊಂಡಿದ್ದರು. ಆದರೆ ಸಿತಾರಿನ ಸೆಳೆತ ಅವರಿಗೇ ಅರಿವಿಲ್ಲದಂತೆ ಗಾಢವಾಗತೊಡಗಿತ್ತು. ಈ ಸೆಳೆತ ತಡೆಯಲಾರದೆ ಕೊನೆಗೆ ಈನಾಯತ್‌ಖಾನ್ ಅವರ ಬಳಿ ಪಾಠಕ್ಕೆ ಸೇರುವುದೆಂದು ತೀರ್ಮಾನಿಸಿದರು. ಅದಕ್ಕಾಗಿ 1934ರಲ್ಲಿ ಭಾರತಕ್ಕೆ ಮರಳಿ ಬಂದರು. ಗಂಡಾಬಂಧನದ ದಿನಾಂಕವೂ ನಿಶ್ಚಯವಾಯಿತು. ಆದರೆ ಹಿಂದಿನ ದಿನ ತುಂಬಾ ಹೊಟ್ಟೆನೋವು ಪ್ರಾರಂಭವಾಗಿ, ಕೊನೆಗದು ಟೈಫಾಯ್ಡ್ ಎಂದಾಗಿ ಆಸ್ಪತ್ರೆಗೆ ಸೇರಬೇಕಾಯಿತು. ಈನಾಯತ್‌ಖಾನ್ ಬಳಿ ಕಲಿಯುವುದಕ್ಕೆ ಸಾಧ್ಯವಾಗಲಿಲ್ಲ. 'ವಿಧಿ ಈ ಗುರುವಿಗೆ ಇದೇ ಶಿಷ್ಯ ಎಂದು ತೀರ್ಮಾನಿಸಿರುತ್ತದೆ. ಅದನ್ನು ಬದಲಿಸುವುದು ಸಾಧ್ಯವೇ ಇಲ್ಲ' ಎಂದು ರವಿಶಂಕರ್ ಒಂದೆಡೆ ಹೇಳಿಕೊಂಡಿದ್ದಾರೆ. ಮುಂದೆ ನಡೆದ ಅಖಿಲ ಬಂಗಾಳ ಸಂಗೀತ ಸಮ್ಮೇಳನ ಅವರ ಬದುಕನ್ನು ಬದಲಿಸಿತು.

## ಅಖಿಲ ಬಂಗಾಳ ಸಂಗೀತ ಸಮ್ಮೇಳನ

"ಅಖಿಲ ಬಂಗಾಳ ಸಂಗೀತ ಸಮ್ಮೇಳನ ನನ್ನ ಬದುಕಿನಲ್ಲಿ ಒಂದು ದೊಡ್ಡ ಘಟನೆ. ಅದು ನಾಲ್ಕುದಿನಗಳ ಬೃಹತ್ ಸಮ್ಮೇಳನ. ಸಂಗೀತಲೋಕದ ನನ್ನ ಆರಾಧ್ಯದೇವತೆಗಳೆಲ್ಲಾ ಅಲ್ಲಿದ್ದರು. ದೊಡ್ಡ ದೊಡ್ಡ ಉಸ್ತಾದರು, ಓಂಕಾರನಾಥ್ ಠಾಕೂರ್, ನಾರಾಯಣರಾವ್ ವ್ಯಾಸ್, ಪಟವರ್ಧನ್ ಹೀಗೆ ಎಲ್ಲಾ ದಿಗ್ಗಜರೂ ಬಂದಿದ್ದರು. ನನ್ನ ಗುರುವಾಗಬೇಕಿದ್ದ ಅಲ್ಲಾವುದ್ದೀನ್ ಖಾನ್‌ಸಾಹೇಬರನ್ನು ನಾನು ಮೊದಲು ಭೇಟಿಯಾದದ್ದು ಅಲ್ಲೇ. ನಾನು ಉಸ್ತಾದ್ ಅಲ್ಲಾವುದ್ದೀನ್ ಖಾನ್‌ಸಾಹೇಬರ ಬಗ್ಗೆ ತುಂಬಾ ಕೇಳಿದ್ದೆ. ಅವರು ತೋರಿಸುತ್ತಿದ್ದ ಅಸಾಧ್ಯವಾದ ಪ್ರೀತಿ, ಹಾಗೇ ಸಿಟ್ಟು ಬಂದಾಗ ಅವರ ಕ್ರೌರ್ಯ ಇವೆರಡರ ಬಗ್ಗೆಯೂ ತುಂಬಾ ಕೇಳಿದ್ದೆ. ಕೋಪಬಂದಾಗ ಕೈಗೆ ಸಿಕ್ಕ ವಸ್ತುವಿನಿಂದ ಅವರು ಹೊಡೆಯುತ್ತಿದ್ದರು ಎಂಬುದನ್ನು ತಿಮಿರ್ ಭರಣ್ ಅವರಿಂದ ಕೇಳಿದ್ದೆ. ಹೀಗೆ ಕೇಳಿ ಕೇಳಿಯೇ ನನಗವರು ತುಂಬಾ ಪರಿಚಿತರಾಗಿಬಿಟ್ಟಿದ್ದರು. ಅವರನ್ನು ಮೊದಲ

ಬಾರಿ ನೋಡಿದಾಗ ಅವರನ್ನು ನಾನು ಬಹುದಿನದಿಂದ ಬಲ್ಲೆ ಎಂದನಿಸಿಬಿಟ್ಟಿತು. ಅವರನ್ನು ಮೊಟ್ಟಮೊದಲಿಗೆ ವೇದಿಕೆಯ ಮೇಲೆ ನೋಡಿದಾಗ ಅವರ ಜೊತೆಗೆ ಪುಟ್ಟ ಸರೋದ್ ಹಿಡಿದುಕೊಂಡಿದ್ದ ಅಲಿ ಅಕ್ಬರ್‌ಖಾನ್ ಇದ್ದರು. ನಾನು ಹಲವಾರು ಉಸ್ತಾದರನ್ನು ನೋಡಿದ್ದೆ. ಅವರೆಲ್ಲಾ ಸಾಮಾನ್ಯವಾಗಿ ಮಹಾರಾಜರ ತರಹ ಶೇರ್ವಾನಿ ಧರಿಸಿ, ಬಗೆಬಗೆಯ ಆಭರಣಗಳನ್ನು ತೊಟ್ಟು, ಮೈತುಂಬಾ ಮೆಡಲ್ಲುಗಳನ್ನು ನೇತುಹಾಕಿಕೊಂಡಿರುತ್ತಿದ್ದರು. ಅವರ ನಡುವೆ ತೀರಾ ಸರಳವಾದ ಉಡುಗೆತೊಟ್ಟು, ತಲೆಗೆ ಒಂದು ಬಿಳಿಯ ಟೋಪಿ ಹಾಕಿಕೊಂಡಿದ್ದ, ಸ್ವಲ್ಪ ಕಂದುಬಣ್ಣಕ್ಕಿದ್ದ ಉಸ್ತಾದ್ ಅಲ್ಲಾವುದ್ದೀನ್ ಖಾನ್‌ಸಾಹೇಬರ ಸರಳತೆ ನನಗೆ ತುಂಬಾ ಹಿಡಿಸಿಬಿಟ್ಟಿತು. ನಾಲ್ಕೈದು ದಿನಗಳಿಂದ ಶೇವ್ ಮಾಡಿಕೊಂಡಿಲ್ಲ ಎನ್ನುವಂತೆ ಮುಖದ ಮೇಲೆ ಕೂದಲು ಬೆಳೆದಿತ್ತು, ನನಗವರ ಸಂಗೀತ ತುಂಬಾ ಆತ್ಮೀಯವೆನಿಸಿತು. ಅವರು ನುಡಿಸುವಾಗ ಅವರ ಆಲಾಪ್ ನನ್ನನ್ನು ಆವರಿಸಿಕೊಂಡುಬಿಟ್ಟಿತು. ಅವರ ದ್ರುತ್ ನನ್ನನ್ನು ಬೇರೆಯದೇ ಜಗತ್ತಿಗೆ ಕರೆದುಕೊಂಡು ಹೋಯಿತು. ಉಳಿದೆಲ್ಲರಿಗಿಂತ ಅವರು ತುಂಬಾ ದೊಡ್ಡವರು ಎಂದು ಅಷ್ಟು ಸಣ್ಣ ವಯಸ್ಸಿನಲ್ಲೇ ನನಗನ್ನಿಸಿಬಿಟ್ಟಿತು. ಮುಂದೆ ಮೈಹರ್ ಬ್ಯಾಂಡಿನಲ್ಲಿ ಅವರ ಅದ್ಭುತ ವಯೋಲಿನ್‌ವಾದನ ಕೇಳಿದ ಮೇಲಂತೂ ನನಗವರು ಬೆಂಕಿಯ ಚೆಂಡೆನಿಸಿಬಿಟ್ಟರು. ಅವರೊಳಗಿಂದ ಅಂತಹ ಅಸಾಧಾರಣ ಚೈತನ್ಯ ಚಿಮ್ಮುತ್ತಿತ್ತು. ಅವರೊಂದು ರೀತಿ ಪ್ಯಾಬ್ಲೊ ಕ್ಯಾಸಲ್ ಇದ್ದ ಹಾಗೆ. ಇನ್ಯಾರೊಂದಿಗೂ ಅವರನ್ನು ಹೋಲಿಸುವುದಕ್ಕೆ ಸಾಧ್ಯವಿಲ್ಲ. ಆ ಮಟ್ಟದ ವ್ಯಕ್ತಿ ಅವರು.”

ಆ ವೇಳೆಗೆ ತಿಮಿರ್ ಭರಣ್ ಉದಯಶಂಕರರ ತಂಡವನ್ನು ಬಿಟ್ಟಿದ್ದರು. ಬಿಷ್ಣುದಾಸ್ ಶಿರಾಲಿ



ಸಂಗೀತ ನಿರ್ದೇಶಕರಾಗಿದ್ದರು. ಉದಯ್‌ಶಂಕರ್ ತಮ್ಮ ತಂಡಕ್ಕೆ ಒಬ್ಬ ಒಳ್ಳೆಯ ಸೋಲೊವಾದಕರ ಹುಡುಕಾಟದಲ್ಲಿದ್ದರು. ಅಲ್ಲಾವುದ್ದೀನ್‌ಖಾನ್ ನುಡಿಸುವುದನ್ನು ಕೇಳಿದಾಗ ಅವರು ಭಾರತದ ಅತ್ಯುತ್ಕೃಷ್ಟ ಸಂಗೀತಗಾರ ಎನ್ನುವುದು ಉದಯಶಂಕರರಿಗೆ ಖಾತ್ರಿಯಾಗಿಬಿಟ್ಟಿತ್ತು. ತಮ್ಮ ತಂಡವನ್ನು ಸೇರುವುದಕ್ಕೆ ಅವರನ್ನು ಒಪ್ಪಿಸಿದರು. ಅವರ ಜೊತೆಗೆ ರವಿಶಂಕರ್‌ಗಿಂತ ಎರಡು ವರ್ಷ ಕಿರಿಯವನಾಗಿದ್ದ ಅಲಿ ಅಕ್ಬರನನ್ನೂ ಯುರೋಪಿಗೆ ಕರೆದೊಯ್ಯುವುದು ಎಂದಾಗಿತ್ತು. ಆದರೆ ಅಲಿ ಅಕ್ಬರ್‌ಖಾನ್ ಅವರು ತಮ್ಮ ತಾಯಿಯನ್ನು ತುಂಬಾ ಹಚ್ಚಿಕೊಂಡಿದ್ದರು. ಅವರನ್ನು ಬಿಟ್ಟು ಬರಲು ಅವರು ತಯಾರಿರಲಿಲ್ಲ. ಕೊನೆಗೆ ಅವರನ್ನು ಭಾರತದಲ್ಲೇ ಬಿಟ್ಟು ಹೊರಡಬೇಕಾಯಿತು. ಅದೇ ಹೊತ್ತಿಗೆ ರವಿಶಂಕರರ ತಂದೆ ತೀರಿಕೊಂಡಿದ್ದರಿಂದ ಪ್ರಯಾಣವನ್ನು ಸ್ವಲ್ಪ ಮುಂದೂಡಬೇಕಾಯಿತು. ತಾಯಿಯೊಡನೆ ಸ್ವಲ್ಪದಿನ ಇದ್ದು ನಂತರ ಮುಂಬೈ ಬಂದರಿನಿಂದ ರವಿಶಂಕರ್

ಪ್ರಯಾಣ ಮುಂದುವರೆಸಿದರು. ರವಿಶಂಕರರಿಗೂ ಅಮ್ಮನನ್ನು ಬಿಟ್ಟು ಹೋಗುವುದು ಕಷ್ಟವೆನಿಸಿತ್ತು.


“ಅಮ್ಮನನ್ನು ಬಿಟ್ಟು ಇರುವುದು ಕಷ್ಟ ಅನ್ನಿಸುತ್ತಿತ್ತು. ತುಂಬಾ ಸಂಕಟವಾಗುತ್ತಿತ್ತು. ತೀರದಲ್ಲಿ ನಿಂತಿದ್ದ ನನ್ನಮ್ಮ ಮುಂದಾಗುವುದು ತನಗೆ ಮೊದಲೇ ತಿಳಿದಿತ್ತೋ ಎಂಬಂತೆ ನನ್ನ ಕೈಯ್ಯನ್ನು ಬಾಬಾ ಅವರ ಕೈಯ್ಯಲ್ಲಿಟ್ಟು ‘ನಾನು ನಿಮ್ಮೊಡನೆ ಬರುತ್ತಿಲ್ಲ, ನನ್ನ ಮಗುವನ್ನು ಮತ್ತೊಮ್ಮೆ ನಾನು ನೋಡುತ್ತೇನೋ ಇಲ್ಲವೋ ತಿಳಿಯದು. ಇವನನ್ನು ನಿಮ್ಮ ಮಡಿಲಿಗೆ ಹಾಕಿದ್ದೇನೆ. ನಿಮ್ಮ ಮಗನೆಂದೇ ಭಾವಿಸಿ, ಚೆನ್ನಾಗಿ ನೋಡಿಕೊಳ್ಳಿ’ ಎಂದು ಹೇಳಿದಾಗ, ಅಲ್ಲಿದ್ದವರೆಲ್ಲರ ಕಣ್ಣೂ ತೇವವಾಗಿತ್ತು. ಬಾಬಾ ಕೂಡ ಬಿಕ್ಕಳಿಸಿ ಅತ್ತುಬಿಟ್ಟರು. ಅದೊಂದು ಹೃದಯಸ್ಪರ್ಶಿ ಸನ್ನಿವೇಶವಾಗಿತ್ತು. ಅಮ್ಮನನ್ನು ನಾನು ನೋಡಿದ್ದು ಅದೇ ಕೊನೆಯ ಬಾರಿ.”

ಒಂದು ವರ್ಷದ ವಿದೇಶ ಪ್ರಯಾಣದಲ್ಲಿ ರವಿಶಂಕರ್ ಹೆಚ್ಚುಕಡಿಮೆ ಬಾಬಾಗೆ ಮಾರ್ಗದರ್ಶಿಯ ರೀತಿ ಇದ್ದರು. ಮಗ ಅಲಿ ಅಕ್ಬರನನ್ನು ಬಿಟ್ಟು ಬಂದಿದ್ದ ಬಾಬಾ ರವಿಶಂಕರನಲ್ಲಿ ಮಗನನ್ನು ಕಾಣುತ್ತಿದ್ದರು. ಅದೇ ರೀತಿ ರವಿಶಂಕರ್‌ಗೆ ಬಾಬಾ ತಂದೆಯಂತೇ ಇದ್ದರು. ಬಾಬಾರ ಎಲ್ಲಾ ಅವಶ್ಯಕತೆಗಳನ್ನೂ ರವಿಶಂಕರ್ ನೋಡಿಕೊಳ್ಳುತ್ತಿದ್ದರು. ಹಂದಿಮಾಂಸ ಮತ್ತು ದನದ ಮಾಂಸ ಎರಡನ್ನೂ ಬಳಸದಿರುವ ಹೋಟೆಲ್‌ಗಳನ್ನು ಹುಡುಕಿ ಅವರನ್ನು ಊಟಕ್ಕೆ ಕರೆದೊಯ್ಯುತ್ತಿದ್ದರು. ಒಮ್ಮೆ ಅವರನ್ನು ಖುಷಿ ಪಡಿಸಬೇಕೆಂದು ಬಾಬಾಗೆಂದು ರವಿಶಂಕರ್ ಪೈಪ್, ಹೊಗೆಸೊಪ್ಪು ಹಾಗೂ ಲೈಟರನ್ನು ಕೊಂಡುತಂದರು. ಅದನ್ನು ಕೊಟ್ಟಾಗ ಬಾಬಾ ಕೆಂಡಾಮಂಡಲವಾಗಿಬಿಟ್ಟರು. “ಇದರಿಂದ ನನ್ನ ಮೋರೆಗೆ ಬೆಂಕಿ



ಮೈಹರಿನಲ್ಲಿ ಬಾಬಾ ಜೊತೆ

ಇಡುವುದಕ್ಕೆ ಬಂದಿದ್ದೀಯೇನು? ಹೀಗೆಲ್ಲಾ ನೀನು ಕೊಂಡುಕೊಳ್ಳಬಲ್ಲ ಗುರು ನಾನಲ್ಲ” ಎಂದು ಸಿಕ್ಕಾಪಟ್ಟೆ ರೇಗಿಬಿಟ್ಟರು. ಆದರೆ ಉಳಿದಂತೆ ಅವರು ತುಂಬಾ ಕೋಮಲಹೃದಯದವರು.
“ವಾದನದಲ್ಲಿ ನನಗಿರುವ ಆಸಕ್ತಿಯನ್ನು ಕಂಡು ನನಗೆ ವಾದ್ಯ ಮತ್ತು ಹಾಡುಗಾರಿಕೆ ಎರಡನ್ನೂ ಕಲಿಸಲು ಪ್ರಾರಂಭಿಸಿದರು. ನಾನು ಸರಿಯಾಗಿ ನುಡಿಸದೇ ಹೋದಾಗ ಅವರು ಕೋಪಿಸಿಕೊಂಡು, ನೊಂದುಕೊಳ್ಳುತ್ತಿದ್ದರು. ನಾನು ಒಳ್ಳೆಯ ವಿದ್ಯಾರ್ಥಿಯೇ ಆಗಿದ್ದೆ. ಆದರೆ ನಾನು ನೃತ್ಯಕ್ಕೆ ಹೆಚ್ಚು ಮಹತ್ವ ನೀಡುತ್ತೇನೆ ಎಂದು ಅವರಿಗನಿಸಿತ್ತು. ಝುಗಮಗಿಸುವ ಬೆಳಕಿನ, ಬಣ್ಣದ ಬದುಕಿಗೆ ಮರುಳಾಗಿ ನಾನು ನನ್ನ ಸಂಗೀತ ಪ್ರತಿಭೆಯನ್ನು ಹಾಳುಮಾಡಿಕೊಳ್ಳುತ್ತಿದ್ದೇನೆ ಎಂದವರು ಭಾವಿಸಿದ್ದರು. ಸದಾ ಹುಡುಗಿಯರ ಹಿಂದೆ ಸುತ್ತುತ್ತೇನೆಂದು ನನ್ನನ್ನವರು ಚಿಟ್ಟೆ ಎಂದು ಕಟುವಾಗಿ ಟೀಕಿಸುತ್ತಿದ್ದರು. “ಏಕ್ ಸಾಧೆ ಸಬ್ ಸಾಧೆ, ಸಬ್ ಸಾಧೆ ಸಬ್ ಗಯೆ” ಒಂದನ್ನು ಮನಸಿಟ್ಟು ಸಾಧಿಸಿದರೆ ಎಲ್ಲವೂ ದಕ್ಕುತ್ತದೆ. ಎಲ್ಲದಕ್ಕೂ ಕೈಹಾಕಿದರೆ ಯಾವುದೂ ದಕ್ಕುವುದಿಲ್ಲ ಎಂದು ನನಗೆ ಹೇಳುತ್ತಿದ್ದರು.” ಅವರು ಸಮಾಧಾನವಾಗಿ ಕಲಿಸಿದಾಗಲೆಲ್ಲಾ ನಾನು ತುಂಬಾ ಬೇಗನೆ, ಚೆನ್ನಾಗಿ ಕಲಿಯುತ್ತಿದ್ದೆ. ಆದರೆ ಅವರು ಸಿಟ್ಟಿಗೆದ್ದು ಜೋರುಮಾಡಿದಾಗ ನಾನು ಮಂಕಾಗಿಬಿಡುತ್ತಿದ್ದೆ, ಕಲಿಯುವುದಕ್ಕೆ ಮೊಂಡುತನ ಮಾಡುತ್ತಿದ್ದೆ. ಏಕೆಂದರೆ



ಬಾಲ್ಯದಿಂದಲೂ ನನ್ನನ್ನು ಯಾರೂ ಎಂದೂ ಬೈಯ್ಯುತ್ತಿರಲಿಲ್ಲ. ಆದರೆ ನನಗೆ ಕಲಿಸುವುದು ಅವರಿಗೆ ತುಂಬಾ ಖುಷಿ ಇದೆ ಎನ್ನುವುದು ನನಗೆ ತಿಳಿದಿತ್ತು."

## ಬಣ್ಣದ ಬದುಕಿನಿಂದ ಶುದ್ಧ ನಾದದೆಡೆಗೆ

1936ರಲ್ಲಿ ಉದಯಶಂಕರ್ ಅವರ ತಂಡ ಕೆಲವು ತಿಂಗಳು ಇಂಗ್ಲೆಂಡಿನಲ್ಲಿಯೇ ಉಳಿಯಿತು. ಆಗ ರವಿಶಂಕರ್‌ಗೆ ತುಂಬಾ ಬಿಡುವಿತ್ತು. ಬಾಬಾ ಬೇರೆ ಬೇರೆ ರಾಗಗಳ ಆರೋಹ ಅವರೋಹಗಳನ್ನು ಮತ್ತು ವಿಭಿನ್ನ ಅಭ್ಯಾಸಪಾಠಗಳನ್ನು ಅವರಿಗೆ ಕಲಿಸಿದರು. ಅಭ್ಯಾಸಕ್ಕೂ ಸಾಕಷ್ಟು ಸಮಯ ದೊರಕುತ್ತಿತ್ತು. ಬಾಬಾ ಎಲ್ಲಾ ವಾದ್ಯಗಳನ್ನು ಸೊಗಸಾಗಿ ನುಡಿಸುತ್ತಿದ್ದರು. ಅವರು ನುಡಿಸದೇ ಇದ್ದ ಒಂದೇ ಒಂದು ವಾದ್ಯವೆಂದರೆ ಸಿತಾರ್. ಅದು ನಿಜವಾಗಿಯೂ ಅಚ್ಚರಿಯ ವಿಷಯವಾಗಿತ್ತು. ಆ ಕಾಲದ ಎಲ್ಲಾ ಪ್ರಖ್ಯಾತ ಸಿತಾರ್‌ವಾದಕರಾದ ಕಲ್ಲು ಹಫೀಸ್, ನಾಸಿರ್‌ಖಾನ್, ಇನಾಯತ್‌ಖಾನ್, ಶಿವ ಪಶುಪತಿ ಮುಂತಾದವರೆಲ್ಲರ ಸಿತಾರ್‌ವಾದನ ಕೇಳಿದ್ದರು. ಹಾಗಾಗಿ ಅವರಿಗೆ ಸಿತಾರ್‌ವಾದನದ ಎಲ್ಲಾ ಶೈಲಿಗಳ ಹಾಗೂ ತಂತ್ರಗಾರಿಕೆಯ ಪರಿಚಯವಿತ್ತು. ಬಾಬಾ ಖ್ಯಾಲ್, ಠುಮ್ರಿ, ಧ್ರುಪದ್ ಧಮಾರ್ ಹೀಗೆ ಎಲ್ಲವನ್ನು ರವಿಶಂಕರರಿಗೆ ಕಲಿಸುತ್ತಾ ಹೋದರು. ಕೆಲವು ಹಳೆಯವು, ಕೆಲವು ಹೊಸವು, ಕೆಲವು ಸ್ವಂತ ರಚನೆಗಳು, ಹೀಗೆ ಎಲ್ಲದರ ಪ್ರಯೋಗವೂ ಇವರ ಮೇಲೇ. ಬಾಬಾ ನುಡಿಸಿಕೊಳ್ಳುತ್ತಿದ್ದಾಗ ರವಿಶಂಕರ್ ಮೌನವಾಗಿ ಕುಳಿತು ಅದನ್ನು ಆಲಿಸುತ್ತಿದ್ದರು. ಬಾಬಾ ತಮ್ಮಷ್ಟಕ್ಕೇ ನುಡಿಸಿಕೊಳ್ಳುತ್ತಿದ್ದಾಗ, ಅವರದು ಅಪ್ರತಿಮ ಸಂಗೀತ ಎಂಬುದು ಕೇಳುಗರೆಲ್ಲರ ಅಭಿಪ್ರಾಯ. ರವಿಶಂಕರ್ ಕೂಡ ಇದನ್ನು

ಹಲವು ಕಡೆ ಹೇಳಿದ್ದಾರೆ.
"ಬಾಬಾ ತನ್ನಷ್ಟಕ್ಕೆ ನುಡಿಸಿಕೊಳ್ಳುತ್ತಿದ್ದಾಗ, ಅಥವಾ ಕೆಲವೇ ಜನರ ಮುಂದೆ ನುಡಿಸುತ್ತಿದ್ದಾಗ, ಅವರು ನಿಜವಾದ ಬಾಬಾ. ಆಗವರು ಬೇರೆಯೇ ಆಗಿರುತ್ತಿದ್ದರು. ನನ್ನ ಕಣ್ಣಲ್ಲಿ ನೀರು ಬಂದುಬಿಡುತ್ತಿತ್ತು. ಈ ಅನುಭವ ನನಗೆ ಹಲವು ಬಾರಿ ಆಗಿದೆ. ಅವರು ನಮಗೆಲ್ಲಾ ಕಲಿಸುತ್ತಿದ್ದಾಗಲೂ ಹಲವು ಬಾರಿ ಇಂತಹ ಅನುಭವ ನಮಗಾಗಿದೆ. ಇದನ್ನು ಕೇಳುವ ಸುಯೋಗ ಜನತೆಗೆ ಸಿಗಲೇ ಇಲ್ಲ. ಅವರಿಗೆ ಗುಂಪು ಕಂಡರೆ ಹೆದರಿಕೆ. ಆಗವರು ನಿಯಂತ್ರಣ ಕಳೆದುಕೊಳ್ಳುತ್ತಿದ್ದರು. ಏನೇನೋ ಮಾಡಿಬಿಡುತ್ತಿದ್ದರು"

ಆ ವೇಳೆಗೆ ರವಿಶಂಕರ್ ನರ್ತಕನಾಗಿ ಸಾಕಷ್ಟು ಯಶಸ್ವಿಯಾಗಿದ್ದರು. ಆದರೆ ಅವರು ಸಂಗೀತವನ್ನು ತುಂಬಾ ಇಷ್ಟಪಡುತ್ತಿದ್ದರು. ಸಂಗೀತವೋ ಅಥವಾ ನೃತ್ಯವೋ ಎನ್ನುವುದು ಅವರನ್ನು ತುಂಬಾ ಕಾಡುತ್ತಿದ್ದ ಆಯ್ಕೆಯಾಗಿತ್ತು. ಅದೇ ಸಮಯಕ್ಕೆ ಮಗ ಅಲಿ ಅಕ್ಬರ್ ದಾರಿ ತಪ್ಪುತ್ತಿದ್ದಾನೆ ಎಂದು ಬಾಬಾಗೆ ಸುದ್ದಿ ಬಂತು. ಅವರು ಭಾರತಕ್ಕೆ ಮರಳಬೇಕಾಯಿತು. ರವಿಶಂಕರರಿಗೆ ಪ್ರತಿಭೆ ಇದೆ ಎಂದು ಬಾಬಾಗೆ ಗೊತ್ತಿತ್ತು. ಆದರೆ ಈ ಯೂರೋಪಿನ ರಂಗುರಂಗಾದ ಥಳುಕಿನ ಲೋಕದಲ್ಲಿ ರವಿಶಂಕರ್ ಹಾಳಾಗಿಬಿಡುವ ಸಾಧ್ಯತೆಗಳೇ ಬಾಬಾರಿಗೆ ಕಾಣುತ್ತಿತ್ತು. ಹಾಗಾಗಿಯೇ ಭಾರತಕ್ಕೆ ಮರಳುವ ಮುನ್ನ ರವಿಶಂಕರ್ ಬಳಿ ಬಂದು, ಯುರೋಪಿನ ಈ ಥಳುಕಿನ ಬದುಕನ್ನು ಬಿಟ್ಟು ಮೈಹರ್ ಗ್ರಾಮಕ್ಕೆ ಬಂದು ತಮ್ಮೊಡನಿದ್ದರೆ ಮಾತ್ರ ನಿಜವಾದ ಸಂಗೀತದ ಕಲಿಕೆ ಸಾಧ್ಯ ಎಂದು ಬಾಬಾ ಹೇಳಿದ್ದರು. ಜೊತೆಗೆ ಈ ಐಶಾರಾಮಿ ಬದುಕನ್ನು ಬಿಡುವುದು ರವಿಶಂಕರ್‌ಗೆ ಸಾಧ್ಯವೇ, ಎನ್ನುವ ಅನುಮಾನವನ್ನೂ ವ್ಯಕ್ತಪಡಿಸಿದ್ದರು. ಬಾಬಾ ಹೊರಟುಹೋದ ಮೇಲಂತೂ ರವಿಶಂಕರ್ ನೃತ್ಯಕ್ಕೆ ಹೆಚ್ಚೆಚ್ಚು ಅಂಟಿಕೊಂಡರು. ಇವರ ನೃತ್ಯವನ್ನು ಜನ ಮೆಚ್ಚಿಕೊಳ್ಳುತ್ತಿದ್ದರು. ಒಂದಿಷ್ಟು ಕಥಕ್ ಕಲಿತು, ಇವರೇ 'ಚಿತ್ರಸೇನಾ' ಎನ್ನುವ ಒಂದು ಸಣ್ಣ ನೃತ್ಯಕ್ಕೆ ಕೋರಿಯೋಗ್ರಾಫ್ ಮಾಡಿದರು. ಅದು ತುಂಬಾ ಯಶಸ್ವಿಯೂ ಆಯಿತು. ಪತ್ರಿಕೆಗಳಲ್ಲೂ ಅದಕ್ಕೆ ಒಳ್ಳೆಯ ವಿಮರ್ಶೆ ಬಂದಿತ್ತು. ಹೀಗಾಗಿ ಒಂದು ನಿರ್ಧಾರಕ್ಕೆ ಬರುವುದು ಇವರಿಗೆ ಮತ್ತಷ್ಟು ಕಷ್ಟವಾಯಿತು. ಕೊನೆಗೂ ಗೆದ್ದದ್ದು ಸಿತಾರಿನ ಸೆಳೆತವೇ. 1938ರಲ್ಲಿ ಉದಯಶಂಕರ್ ತಮ್ಮ ತಂಡದೊಡನೆ ಭಾರತಕ್ಕೆ ಮರಳಿ ಅಲ್ಮೋರಾದಲ್ಲಿ ಒಂದು ಸಾಂಸ್ಕೃತಿಕ ಸಂಘವನ್ನು ಕಟ್ಟುವ ತಯಾರಿಯಲ್ಲಿದ್ದರು. ಆಗ ಮೈಹರಿನಲ್ಲಿ ಬಾಬಾರ ಬಳಿ ಸಂಗೀತ ಕಲಿಯುವುದು ಎಂದು ರವಿಶಂಕರ್ ತೀರ್ಮಾನಿಸಿದರು. ಐದಾರು ತಿಂಗಳು ಹೋಗಿ ಬಾ ಎಂದು ಉದಯಶಂಕರ್ ಒಪ್ಪಿಗೆ ಕೊಟ್ಟರು. ಸಂಪೂರ್ಣವಾಗಿ ಸಂಗೀತದಲ್ಲೇ ಉಳಿಯುವ ನಿರ್ಧಾರವನ್ನು ರವಿಶಂಕರ್ ಅಣ್ಣನ ಬಳಿ ಬಾಯಿಬಿಟ್ಟಿರಲಿಲ್ಲ.

1936ರಲ್ಲಿ ಲಂಡನ್ನಿನಲ್ಲಿ ಶಿವಪಾರ್ವತಿ ನೃತ್ಯರೂಪಕದ ಪ್ರದರ್ಶನದಲ್ಲಿ ರವಿಶಂಕರ್

